138(2)

SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 107] ಗುರುವಾರ 20—12—45 [ಬಿಡಿ ಪ್ರತಿ 3 ಪೈ

ಸಾಮ್ರಾಜ್ಯಶಾಹಿ ತತ್ವ

'ಫೀಚರ್ಸ್ ಆಫ್ ಕೇಪಿಟಲಿಜಂ' ಎಂಬ ಗ್ರಂಥವು ಹೀಗೆ ತಿಳಿಸುತ್ತದೆ—

ದರೋಡೆಯು ಬಂಡವಾಳಶಾಹಿಯ ಅಡಿಗಲ್ಲು. ಬಂಡವಾಳಗಾರನ ಸೊಪ್ಪದಲ್ಲಿ ಫ್ಯಾಕ್ಟರಿಗಳೂ, ಯಂತ್ರಗಳೂ, ರೈಲು ಮಾರ್ಗಗಳೂ, ಗಣಿಗಳೂ, ಹಡಗುಗಳೂ, ಬ್ಯಾಂಕುಗಳೂ ಎಲ್ಲವೂ ಬಂಡವಾಳಗಾರರ ಕೈಯಲ್ಲಿರುತ್ತವೆ ಬಂಡವಾಳಗಾರರು ತಮ್ಮ ಉತ್ಪತ್ತಿಯಲ್ಲಿ ಸ್ವಲ್ಪ ಭಾಗವನ್ನು ಸ್ವಪ್ರಯೋಜನಗಳಿಗೂ, ವಿಲಾಸಗಳಿಗೂ ಲಂಚಗಳಿಗೂ ಭೋಗಲಾಲಸತ್ವಕ್ಕೂ ವ್ಯಯಮಾಡುವರು ಸ್ವಲ್ಪ ಭಾಗವನ್ನು ತಮ್ಮ ಕಂಪೆನಿಗಳನ್ನು ವೃದ್ಧಿಪಡಿಸಲು, ಯಂತ್ರಗಳನ್ನು ರಿಪೇರಿ ಮಾಡಿಸಲು ವಿನಿಯೋಗಿಸುವರು ಇನ್ನು ಸ್ವಲ್ಪ ಭಾಗವನ್ನು ಕೂಲಿಗಳನ್ನು ಅಚ್ಚಿನಲ್ಲಿಡಲು ಸರ್ಕಾರಿ ಕೆಲಸವೆಂಬ ಏಲಿಟರ ಮಿತ್ರವನ್ನೂ ಪೋಲಿಸಿನವರನ್ನೂ ಮತಾಧಿಕಾರವನ್ನು ಪೋಷಿಸಲು ವ್ಯಯ ಮಾಡುವರು. ಈ ಬಗೆಯಲ್ಲಿ ಕೂಲಿಯವರನ್ನು ಹಿಂಡಿ ಹಿಸುಕಿ ಹಾಕುವಂಥವರೆಲ್ಲರನ್ನೂ ಪೋಷಿಸುತ್ತಾರೆ. ಇದೇ ಬಂಡವಾಳಶಾಹಿಯೆನ್ನುವಂಥಾದ್ದು.

ಪಂ॥ ನೆಹರು

ಯಾವ ದೇಶದಲ್ಲಿ ಪಂ॥ ಜವಾಹರ್‌ಲಾಲ್‌ರಂತಹ ಸಾಹಸೋದಾರಿಗಳು ಜನಿಸುವರೋ ಆ ದೇಶಕ್ಕೆ ಒಂದು ಬಗೆಯೋಗ ಸೂಚನೆಯು. ಇಂಥಹ ಸಾಹಸ ಧೈರ್ಯ ದೀಕ್ಷೆ ಧೃತಿ ಸ್ವಾತಂತ್ರ್ಯ ಪ್ರೇಮುಗಳುಳ್ಳವರು ಪ್ರಪಂಚದಲ್ಲಿ ಅನೇಕ ಮಂದಿಗಳಿರುವುದಿಲ್ಲ ಇಂಥವರು ಬೇರೆ ಬೇರೆ ದೇಶಗಳಲ್ಲಿ ಯುಗ ಯುಗಗಳಲ್ಲಿ ಸ್ವಾತಂತ್ರ್ಯ ಸಾಧನೆಗಾಗಿ ಜನ್ಮವನ್ನು ತಳೆಯುತ್ತಿರುತ್ತಾರೆ. ಯಾವ ದೇಶವು ಅಂಥಾ ಪುತ್ರನನ್ನು ಪಡೆದಿರುವ ಭಾಗ್ಯವನ್ನು ಹೊಂದಿ ಎವುದೋ ಆ ಈ ಭಾರತವು ಅತಿ ಶೀಘ್ರ ಕಾಲದಲ್ಲಿಯೇ ಸ್ವಾತಂತ್ರ್ಯ ಸುಖವನ್ನು ಪಡೆಯುವುದು ನಿಶ್ಚಯವು.

ಕಾಂಗ್ರೆಸಿನ ಪಿತೂರಿ

ನವೆಂಬರ್ 20 ನೆಯ ತಾರೀಖು ಬಿಹಾರಿನ ಸಾಸರಾಂ ಜಿಲ್ಲೆಯ ಕುದ್ರಾ ಎಂಬ ಗ್ರಾಮದಲ್ಲಿ ಭತ್ತದ ಗದ್ದೆಗಳಲ್ಲಿ ಕೆಲಸ ಮಾಡುವ ರೈತರ ಸಮ್ಮೇಳನವೊಂದನ್ನು ಏರ್ಪಡಿಸಲಾಗಿತ್ತು. ಅದನ್ನು ಮುರಿಯಲು ಡೆಪ್ಯುಟಿ ಮ್ಯಾಜಿಸ್ಟ್ರೇಟರ ಸಹಾಯದಿಂದ ಕಾಂಗ್ರೆಸಿನ ಮುಖಂಡಾಳುಗಳು ಸ್ಥಳೀಯ ಅಧಿಕಾರಿಗಳು ನಡೆಸಿದ ಪಿತೂರಿ ರೈತರ ಧೈರ್ಯ ಸಂಘಟನಾಶಕ್ತಿಗಳಿಂದ ವಿಫಲವಾಯಿತು. (ಬಿ)

ಜಾನ್ ಎಮರಿ ಗಲ್ಲಿಗೇರಿಸಲ್ಪಟ್ಟರು

ಲಂಡನ್, ಡಿ 18 — ಈ ದಿನ ದಿವಿ 9 ಘಂಟೆಗೆ ಪಾಜಿ ಭಾರತ ಮಂತ್ರಿ ಎ ಮರಿಯವರ ಮಗ ಜಾನ್ ಎಮರಿಯವರು ಗಲ್ಲಿಗೇರಿಸಲ್ಪಟ್ಟರು ಪುತ್ರ ಜೀವ ರಕ್ಷಣೆಗಾಗಿ ಎಮರಿಯವರು ಅಂತ್ಯ ದೆವರೆಗೂ ಶ್ರಮವಹಿಸಿದರು.

ಸಿಂಗಪುರ, ಡಿ 18 — ಮಲೆಯಾವು ಸ್ವರಾಜ್ಯ ಚಳುವಳಿ ಹೂಡುವುದಾಗಿದೆ.

ಂ ಂ

ಸೈಗಾಂ ಚಿ 18 — ಇಂಡೋ ಚೀಣದಲ್ಲಿ ಗಲಭೆ ಪ್ರಾರಂಭವಾದಂದಿನಿಂದ ನವೆಂಬರ್ 25 ರ ವರೆಗೆ ಕೋರ್ಟ್ ಮಾರ್ಷಲ್ ಒಂಬತ್ತು ಮಂದಿಗೆ ಮರಣದಂಡನೆ ವಿಧಿಸಿದೆ.

ಂ ಂ

ಬ್ಲೂಯಂಫೋರ್ಟ್, ಡಿ 18 — ಬರುವ ವರ್ಷ ಇಲ್ಲಿ ಪ್ರಪಾಚದಲ್ಲೇ ಅತ್ಯಂತ ಶಕ್ತಿದಾಯಕವಾದ ದುರ್ಬೀನು ಸ್ಥಾಪಿಸಲ್ಪಡುವುದು

ಂ ಂ

ಶಾಂತಿನಿಕೇತನ ಡಿ 18 — ಮಹಾತ್ಮ ಗಾಂಧಿಯವರು ಇಲ್ಲಿಗೆ ಈ ಸಂಜೆ ನಾಲ್ಕು ಘಂಟೆಗೆ ತಲುಪಿದರು ಗುರುದೇವ ಟಾಗೂರರ ಮಣ್ಣಿನ ಮನೆ 'ಶ್ಯಾಮಲಿ' ಯಲ್ಲಿ ತಂಗಿರುವರು.

ಂ ಂ

ವಾಷಿಂಗ್ಟನ್ ವರದಿಯಂತೆ ಸಂಯುಕ್ತ ಅಮೇರಿಕಾ ಜನಸಂಖ್ಯೆ 11 ನೇ ಅಕ್ಟೋಬರ್‌ನಲ್ಲಿ 140000000 ಗೆ ಹೆಚ್ಚಿರುವುದಂತೆ.

ಂ ಂ

ಬೊಂಬಾಯಿ, ಡಿ 19 — ಬೊಂಬಾಯಿಗೆ ಸುಮಾರು ಎಂಟ್ನೂರು ಮೈಲಿಯಾಚೆ ಭೂಕಂಪವಾದುದು ಕೊಲಾಬ ಅಬ್ಸರ್ವೇಟರಿಯಲ್ಲಿ ಗೊತ್ತಾಗಿದೆ.

ಂ ಂ

ಬೆಂಗಳೂರು, ಡಿ 18 — ಬೆಂಗಳೂರು ರೇಸ್‌ಕೋರ್ಸಿನಲ್ಲಿ ಜನವರಿ 1 ನೇ ತಾರೀಖಿನ ದಿವಸ ಹಂಟ್ ರೇಸ್ ನಡೆಯುವುದು.

ಬಟೇವಿಯಾ, ಡಿ 18 — ಜಾವಾದಲ್ಲಿ ಹೊಡೆದಾಟ ನಡೆಯುತ್ತಿದೆ. ನೂರು ಮಂದಿ ಇಂಡುನೇಷಿಯನ್ನರು ಮಡಿದರು.

ಂ ಂ

ಆರ್ಕಾಟ್, ಡಿ 19 — ಒರ್ವಾದಲ್ಲಿ ಭಾರತ ಮಂಡಲದಲ್ಲೊಬ್ಬರಾದ ಶ್ರೀ ಎ ಎಂ ಎ ವೆಲ್ಲಿಯಂ ಚೆಟ್ಟಿಯಾರರನ್ನು ಭಾರತೀಯ ತರುಣನು ಗುಂಡುಹಾಕಿ ಕೊಂದಿರುವನು.

ಂ ಂ

ಸಿಲ್‌ಹಟ್, ಡಿ 18 — ಪಂ॥ ನೆಹರವರು ಸುರ್ಮಾ ವ್ಯಾಲಿಯಲ್ಲಿ ಪ್ರವಾಸ ನಡೆಸುತ್ತಾ ಕಾಂಗ್ರೆಸಿಗೆ ಸಹಾಯ ಸಹಕಾರವನ್ನೀಯಬೆ ಕೆಂದು ಕೋರಿದರು. ಇವರ ಭಾಷಣವನ್ನು ಲಕ್ಷಿಗನಶು ತೊಂದರೆ ಪಡಿಸಲು ಪ್ರಯತ್ನವನ್ನು ಮಾಡಿದರು.

ಂ ಂ

ಲಂಡನ್ ಡಿ 18 — ಮಿ॥ ಚರ್ಚಿಲರು ಮುಂದಿನ ವರ್ಷ ಅಮೇರಿಕಾಕ್ಕೆ ಭೇಟಿ ಕೊಡುವ ಯೋಚನೆಯಲ್ಲಿರುವುರೆಂದು ಹೇಳಲಾಗಿದೆ.

ಂ ಂ

ಮದ್ರಾಸ್, ಡಿ 18 — ಡಾ॥ ಅಲಗಪ್ಪಚೆಟ್ಟಿಯಾರರು ಸಂಗೀತ ವಿದ್ಯಾಲಯಕ್ಕೆ ಹದಿನಾರು ಸಾವಿರ ರೂಪಾಯಿಗಳ ದಾನ ಮಾಡಿದ್ದಾರೆ.

ಹಿಟ್ಲರ ಪೂಜೆ

ಯುದ್ಧ ಮುಗಿದು ಇನ್ನೂ ಆರು ತಿಂಗಳಾಗಿಲ್ಲ. ಆಷ್ಟರೊಳಗೇ ಬ್ರಿಟನ್‌ನಲ್ಲಿ ಹಿಟ್ಲರ್ ಪೂಜೆ ಆರಂಭವಾಗಿದೆ ವಂದಿಯಿದೆ ಎಲ್ಲ ಇಂಗ್ಲೀಷರು ಹಿಟ್ಲರನನ್ನು ಕೆಟ್ಟವನೆಂದು ತಿಳಿಯುತ್ತಿಲ್ಲ ಹಿಟ್ಲರೊಬ್ಬ ಮಹಾಪುರುಷನೆಂದು ತಿಳಿದವರೂ ಇರುವರು. ಲಂಡನ್ನಿನ ಕೇಪ್ಟನ್ ರೊಬರ್ಟ್ ಗೋರ್ಡನ್ ಕೆನ್ನಿಂಗ್ ಎಂಬುವರು ಹಿಟ್ಲರರ ಪ್ರತಿಮೆಯೊಂದನ್ನು ಲಂಡನ್ನಿನಲ್ಲಿ ಜರ್ಮನ್ ರಾಯಭಾರಿ ಕಚೇರಿಯ ಸರಕುಗಳ ಹರಾಜು ನಡೆದಾಗ ಇತ್ತೀಚಿಗೆ ಕೊಂಡುಕೊಂಡರು. ಮತ್ತೆ. ದಿಟ್ಟತನದಿಂದ ಪತ್ರಿಕಾಪ್ರತಿನಿಧಿಗಳಿಗೆ ಹೀಗೆ ಹೇಳಿದರು: 'ಎರಡು ಸಾವಿರ ವರ್ಷಗಳ ಹಿಂದೆ ಯೇಸುಕ್ರಿಸ್ತನನ್ನು ಜರೆದಾಡಿದರು; ಒಯ್ದರ; ಭಂಗಿಸಿದರು; ಕೊನೆಗೆ ಶಿಲುಬೆಗೇರಿಸಿದರು; ಇಂದು ಯೇಸುವು ಸಜೀವ ಶಕ್ತಿ; ಅವನನ್ನು ಭಂಗಿಸಿದವರು ನೀಚರು.' (ಪ್ರತಿಮೆಯನ್ನು ರೊಬರ್ಟ್ಸ್‌ರವರು ಅರುಸಾವಿರದೈನೂರು ರೂಪಾಯಿಗಳಿಗೆ ತೆಗೆದುಕೊಂಡಿರುವರು.) ಇವರು 1940 ರಲ್ಲಿ ಹಿಟ್ಲರ್ ಪಂಥದವರೆಂದು ಬಂಧಿತರಾಗಿದ್ದು 1943 ರಲ್ಲಿ ಬಿಡುಗಡೆ ಮಾಡಲ್ಪಟ್ಟರು. (ಪ್ರ)

ಉದಾರ ಸಹಾಯ

ಬೊಂಬೈ ಡಿ 7 — ಮೈಸೂರು ಸರ್ಕಾರವು ಪಂಡಿತ ನೆಹರು ಅಧ್ಯಕ್ಷರಾಗಿರುವ ನ್ಯಾಷನಲ್ ಪ್ಲಾನಿಂಗ್ ಕಮಿಟಿಗ ಎರಡು ಸಾವಿರ ರೂಪಾಯಿಗಳ ಧನ ಸಹಾಯ ಮಾಡಿದೆ ಎಂದು ಕಮಿಟಿಯ ಕಾರ್ಯದರ್ಶಿಗಳಿಂದ ತಿಳಿದುಬಂದಿದೆ(ಬಿ)

ವಿಚಿತ್ರ ಕಳ್ಳ

ಅಮೇರಿಕದ ಸಿರಕ್ಯೂದಲ್ಲಿ ಒಬ್ಬ ಕಳ್ಳನು ಒಂದು ಅಂಗಡಿಯ ಕನ್ನಡಿ ಬಾಗಿಲನ್ನು ಒಡೆದು ಒಂದು ಬಾಟಲಿ ಮದ್ಯವನ್ನು ಕದ್ದನು. ಮರು ದಿನ ಮತ್ತೊಂದು ಕನ್ನಡಿಬೊಡೆದು. ಒಳಗೆ ಹೊಕ್ಕು ಬರದಾದ ಆ ಬಾಟಲಿಯನ್ನಿಟ್ಟು ಬಂದನು.

.....

ಚುನಾವಣೆಗಾಗಿ ಖರ್ಚು

ಸಿಂಧ್ ಗವರ್ನರರು ಕರಾಚಿಯಲ್ಲಿ ಮಾತನಾಡುತ್ತಾ ಮುಂದೆ ನಡೆಯಲಿರುವ ಚುನಾವಣೆಗಳಿಗೆ ಸಿಂಧ್ ಪ್ರಾಂತ್ಯದಲ್ಲೇ ಅರ್ಧ ಕೋಟಿ ರೂಪಾಯಿಗಳಷ್ಟು ವ್ಯಯವಾಗುವುದು. ಇದರಲ್ಲಿ ಶೇಖಹು ಭಾಗ ಲಂಚ ರುಷುವತ್ತುಗಳಿಗೆ ಹೋಗುವುದೆಂದು ಹೇಳಲು ದಃಖಿಸುತ್ತೇನೆ ಎಂದರು (ಬಿ)

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಚಿತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪೂರಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೨-೪-೦ ಮಾತ್ರ.

ನಮ್ಮ ಸುಪ್ತಂದ ಅಡಿಕೆಪುಡಿ ಒಂದು ವೈಶಿಷ್ಟ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪೂತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮಡರಾಸು.

AT Opera From 20-12-45

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ

ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

Morning Shows from 21—12—45 (Double programme)

Yanks Ahoy — The McGuerins from Brooklyn

— ಸೂಚನೆ —

ಚಂದ್ರಗ್ರಹಣದ ಪ್ರಯುಕ್ತ ನಿನ್ನೇ ದಿನಪತ್ರಿಕೆಯು ಪ್ರಕಟಿಸಲ್ಪಡಲಿಲ್ಲ.

Edited, Printed and published by M. S. Krishna Rao, at the Satvavadi Press, Chamareja Agrahar, Mysore

ಹರ್ಷ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ಟಾವಂಡೂರ್ ವೀರಶೈವ್ಟ್ & ಸನ್ಸ್

ಶಿವರಾಂಪೇಟೆ ಮೈಸೂರು.

At Ranjit

Sant Tulsi Das

ವಿಷ್ಣುಪಂತ್ ಪಗ್ನೀಸ್, ಲೀಲಾಚಿಟ್ನೀಸ್

ವಾಸಂತಿ ಪಾತ್ರವಹಿಸಿರುವ

ಸಂತ್ ತುಳಸೀ ದಾಸ್

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ, ಮೈಸೂರು

ಅಕ್ಕ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ರಕ್ತವರ್ಧಿಗೆ — ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿಗೆ ಒಂದು ರೂಪಾಯಿ.

ವಿಳಾಸ — ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು